# ಸ್ವಾಭಿಮಾನದ ಜೀವನಕ್ಕೆ ಸುಂದರ ನಿವಾಸ



ಎಸ್.ರವಿಪ್ರಕಾಶ್


> ಬಡವರಿಗೆ ಕಡಿಮೆ ಖರ್ಚಿನಲ್ಲಿ, ಅಚ್ಚುಕಟ್ಟಾದ, ಪರಿಸರಸ್ನೇಹಿ ಮನೆಗಳನ್ನು ಕಟ್ಟಿಕೊಳ್ಳಲು ನೆರವಾಗುತ್ತಿದೆ 'ನಿವಾಸ' ಸೇವಾಸಂಸ್ಥೆ. ಬಡವರ ಮನೆಯ ಚಹರೆ, ಸೊಬಗು ಬದಲಿಸಲು ಪಣತೊಟ್ಟಿದ್ದಾರೆ ಸಂಸ್ಥೆಯ ರೂವಾರಿ ವಾಸ್ತುಶಿಲ್ಪಿ ಅಖಿಲಾ ರಮೇಶ್.

ನಮ್ಮ ಸುತ್ತಲಿನ ವಾತಾವರಣ ನಂದಗೋಕುಲದಂತೆ ಇರಲಿ. ಇಂತಹ ಆಶಯ ಸಾಮಾನ್ಯವಾಗಿ ಎಲ್ಲರಲ್ಲೂ ಇರುತ್ತದೆ. ದ್ವಾಪರಯುಗದಲ್ಲಿ ಶ್ರೀಕೃಷ್ಣ ನೆಲೆಸಿದ್ದ ಎನ್ನಲಾದ ಗೋಕುಲದ ಚಿತ್ರಣ ಇಂದಿಗೂ ಭಾರತೀಯರ ಮನಃಪಟಲದಲ್ಲಿ ಅಚ್ಚಳಿಯದೇ ಉಳಿದಿದೆ. ಪ್ರಾಚೀನ ಕಾಲದ 'ಗ್ರಾಮ್ಯ ಗೋಕುಲ' ಹೇಗಿದ್ದಿರಬಹುದು ಊಹಿಸಿಕೊಳ್ಳಿ.

ಇದನ್ನು ಆದರ್ಶ ಪರಿಕಲ್ಪನೆ ಎನ್ನಲು ಅಡ್ಡಿ ಇಲ್ಲ. ಹಳ್ಳಿಯಲ್ಲಿ ಅಚ್ಚುಕಟ್ಟಾದ, ಸ್ವಚ್ಛತೆಯಿಂದ ಕೂಡಿದ ಗುಡಿಸಲುಗಳು ಮತ್ತು ಮನೆಗಳು. ಹಸಿರು, ಹೂವು, ಪಶು-ಪಕ್ಷಿಗಳಿಂದ ಕೂಡಿದ ಪರಿಸರ. ಜನರೂ ಪರಸ್ಪರ ಪ್ರೀತಿ- ವಿಶ್ವಾಸದಿಂದ ಬದುಕುವ ವಾತಾವರಣ. ಹಳ್ಳಿಯಾದರೂ ಸ್ವರ್ಗಕ್ಕೇನೂ ಕಮ್ಮಿ ಅಲ್ಲ ಅಲ್ಲವೇ?

ಇಂದಿನ ದಿನಮಾನದಲ್ಲಿ ಇಂಥದ್ದೊಂದು ಹಳ್ಳಿಯನ್ನು ಕಲ್ಪಿಸಿಕೊಳ್ಳುವುದೂ ಕಷ್ಟ. ಒಂದಂತೂ ನಿಜ, ಮನೆ ಚೆನ್ನಾಗಿದ್ದರೆ, ಮನವೂ ಚೆನ್ನಾಗಿರುತ್ತದೆ. ಎಲ್ಲರ ಮನಸ್ಸು ಚೆನ್ನಾಗಿದ್ದರೆ, ಹಳ್ಳಿಯೂ ಚೆನ್ನಾಗಿರುತ್ತದೆ. ಇದೊಂದು ಸರಳ ತರ್ಕ.

ಗ್ರಾಮಗಳ ಮಾತು ಹಾಗಿರಲಿ, ನಗರಗಳಲ್ಲೂ ಬಡವರಿಗೆ ಸುಂದರ ಮನೆಗಳು ಸಿಗುವುದು ಕಷ್ಟ. ಆಗಲೋ-ಈಗಲೋ ಬೀಳುವಂತಿರುವ ನಾಲ್ಕು ಗೋಡೆಗಳು, ಅದರ ಒಳಗೆ ದಾರಿದ್ರ್ಯವೇ ಮಡುಗಟ್ಟಿದಂತಿರುತ್ತದೆ. ಸರ್ಕಾರ ಬಡವರಿಗಾಗಿ ಕಟ್ಟಿಸುವ ಮನೆಗಳೂ ಇದಕ್ಕಿಂತ ಭಿನ್ನವಾಗಿರುವುದಿಲ್ಲ ಎಂಬುದು ಬೇರೆ ಮಾತು.



## ಬದಲಾವಣೆಗೆ 'ನಿವಾಸ'

ಈ ಸ್ಥಿತಿಯನ್ನು ಬದಲಿಸಲು ಸಾಧ್ಯವಿಲ್ಲವೆ? ಬಡವರು ಕಡಿಮೆ ಖರ್ಚಿನಲ್ಲಿ, ಅಚ್ಚುಕಟ್ಟಾದ, ಪರಿಸರಸ್ನೇಹಿ ಮನೆಗಳನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲವೇ?

ಈ ಎರಡೂ ಪ್ರಶ್ನೆಗೆ 'ಹೌದು, ಸಾಧ್ಯವಿದೆ' ಎಂದೇ ಉತ್ತರಿಸುತ್ತಾರೆ ವಾಸ್ತುಶಿಲ್ಪಿ ಅಖಿಲಾ ರಮೇಶ್. ಬಡವರ ಜೀವನದಲ್ಲಿ ಹೊಸ ಗಾಳಿ ಬೀಸುವಂತೆ ಮಾಡುವ ಪ್ರಯತ್ನಕ್ಕೂ ಅವರು ಮುಂದಾಗಿದ್ದಾರೆ. ಹಾಗೆಂದು ಇವರನ್ನು ಬಿಲ್ಡರ್ ಎಂದು ಭಾವಿಸಬೇಡಿ.

ಇವರು 'ನಿವಾಸ' ಎಂಬ ಸೇವಾ ಸಂಸ್ಥೆಯನ್ನು ಕಟ್ಟಿಕೊಂಡು ಸೇವಾ ಉದ್ದೇಶದಿಂದಲೇ ಬಡವರ ವಾಸದ ಮನೆಗಳ ಚಹರೆ, ಸೊಬಗು ಬದಲಿಸಲು ಪಣ ತೊಟ್ಟಿದ್ದಾರೆ.

## ಮಾರ್ಗದರ್ಶನ

ಕೈಗೆಟುಕುವ ಬೆಲೆಯಲ್ಲಿ ಅಚ್ಚುಕಟ್ಟಾದ, ಸುಂದರ ಮನೆಗಳನ್ನು ಹೇಗೆ ಕಟ್ಟಿಕೊಳ್ಳಬಹುದು ಎಂಬುದರ ಪ್ಲಾನ್ ಮಾಡಿಕೊಡುವುದರ ಜೊತೆಗೆ ಮಾರ್ಗದರ್ಶನವನ್ನೂ ನೀಡುತ್ತಾರೆ. ಇದಕ್ಕಾಗಿ ಅಖಿಲಾ ರಮೇಶ್ ಮತ್ತು ತಂಡ ಸ್ಥಳಕ್ಕೆ ಭೇಟಿ ನೀಡಿ ಅಧ್ಯಯನ ನಡೆಸುತ್ತದೆ. ಲಭ್ಯವಿರುವ ನಿವೇಶನದಲ್ಲಿ, ಸ್ಥಳೀಯವಾಗಿ ಸಿಗುವ ನಿರ್ಮಾಣ ಸಾಮಗ್ರಿಗಳನ್ನು ಬಳಸಿಕೊಂಡು ಕಡಿಮೆ ಖರ್ಚಿನಲ್ಲಿ ಮನೆ ಕಟ್ಟುವುದಕ್ಕೆ ಸಲಹೆ ನೀಡುತ್ತಾರೆ.

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ, ಗುಡ್ಡಗಾಡುಗಳಲ್ಲಿ ಗಾರೆಯವರೇ ಸರ್ವಸ್ವ ಆಗಿರುತ್ತಾರೆ. ಅವರದ್ದೇ ಪ್ಲಾನ್, ಅವರದ್ದೇ ಅನುಷ್ಠಾನ. ಇಲ್ಲಿ ಅಭಿರುಚಿಗಿಂತ ಸ್ಥಳೀಯ ಗಾರೆ/ ಮೇಸ್ತ್ರಿಯ ಯೋಚನಾ ಪರಿಧಿಗೆ ನಿಲುಕಿದ್ದೇ ವಿನ್ಯಾಸ.

'ಕಾಸಿದ್ದವರು ಕೊಂಚ ದೊಡ್ಡದ್ದಾಗಿ, ಅಂದವಾಗಿ ಕಟ್ಟಿಸಿಕೊಳ್ಳಬಲ್ಲರು. ಇದಕ್ಕಾಗಿ ದೊಡ್ಡ ಊರುಗಳ ಆರ್ಕಿಟೆಕ್ಟ್‌ಗಳನ್ನು ಸಂಪರ್ಕಿಸುತ್ತಾರೆ. ಬಡವರಿಗೆ ಯಾರು ನೆರವಾಗುತ್ತಾರೆ? ಅವರಿಗೆ ನೆರವು ನೀಡಬೇಕು ಎಂಬುದೇ ನಮ್ಮ ಉದ್ದೇಶ' ಎನ್ನುತ್ತಾರೆ ಅಖಿಲಾ.

## ನೆರವು ಅಗತ್ಯ

'ನಮ್ಮ ಬಳಿ ಆಲೋಚನೆ ಇದೆ, ಸೃಜನಶೀಲತೆ ಇದೆ. ಆದರೆ ಯೋಜನೆಗಳನ್ನು ಕಾರ್ಯಗತಗೊಳಿಸಲು ಆರ್ಥಿಕ ಶಕ್ತಿ ಇಲ್ಲ. ಸರ್ಕಾರದ ವಿವಿಧ ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳು, ಸಾಮಾಜಿಕ ಸಂಘಟನೆಗಳು, ಬ್ಯಾಂಕ್‌ಗಳು, ರಿಯಲ್ ಎಸ್ಟೇಟ್ ಡೆವಲಪರ್‌ಗಳು ಕೈ ಜೋಡಿಸಿದರೆ, ಬಡವರ ಜೀವನದಲ್ಲಿ ಮಹತ್ವದ ಬದಲಾವಣೆ ತರಲು ಸಾಧ್ಯವಿದೆ' ಎನ್ನುತ್ತಾರೆ ಅಖಿಲಾ.

ಸಂಸ್ಥೆ ಇದೇ ಉದ್ದೇಶಕ್ಕಾಗಿ ಪಂಚ ವಾರ್ಷಿಕ ಯೋಜನೆ ರೂಪಿಸಿಕೊಂಡಿದೆ. 'ಪ್ರಾಜೆಕ್ಟ್ ಗೃಹ' ಯೋಜನೆಯಡಿ 10 ಸಾವಿರ ಜನರಿಗೆ, ಹಳ್ಳಿಗಳ ಪುನರ್ ಅಭಿವೃದ್ಧಿ ಯೋಜನೆಯಡಿ 50 ಗ್ರಾಮಗಳ ಪುನರ್ ಅಭಿವೃದ್ಧಿ ಮತ್ತು ಪ್ರಾಜೆಕ್ಟ್ ಸೂಟ್‌ಕೇಸ್ ಯೋಜನೆಯಡಿ 25 ಸಾವಿರ ಜನರಿಗೆ ನೆರವಾಗುವ ಉದ್ದೇಶವನ್ನು ನಿವಾಸ ಸಂಸ್ಥೆ ಹೊಂದಿದೆ.

## ಸ್ಥಳೀಯ ಪರಿಕರಗಳು

ಸ್ಥಳೀಯ ಮಣ್ಣಿನಿಂದಲೇ ಇಟ್ಟಿಗೆ ತಯಾರಿಕೆಗೆ ಆದ್ಯತೆ. ಸ್ಥಳೀಯವಾಗಿ ಸಿಗುವ ಮರಗಳ ಬಳಕೆಗೆ ಹೆಚ್ಚು ಒತ್ತು. ಮನೆ ಕಟ್ಟಿಕೊಳ್ಳಲು ಬಯಸುವ ವ್ಯಕ್ತಿಯ ಹಣಕಾಸಿನ ಸ್ಥಿತಿಗೆ ಅನುಗುಣವಾಗಿ ಯೋಜನೆಯಲ್ಲಿ ಮಾರ್ಪಾಡು ಮಾಡುತ್ತಾರೆ. ಆದರೆ, ಗುಣಮಟ್ಟದಲ್ಲಿ ಯಾವುದೇ ರಾಜಿ ಇಲ್ಲ.

## ನಾಲ್ಕು ಯೋಜನೆಗಳು

ಬಡವರಿಗೆಂದೇ ನಿವಾಸ ಸಂಸ್ಥೆಯು ನಾಲ್ಕು ಯೋಜನೆಗಳನ್ನು ರೂಪಿಸಿದೆ. ಅವುಗಳು ಹೀಗಿವೆ-

**ಪ್ರಾಜೆಕ್ಟ್ ಗೃಹ:** ಇದು ಕೈಗೆಟುಕುವ ದರದ ಗ್ರಾಮೀಣ ಮನೆಯ ಯೋಜನೆ. ಸ್ಥಳೀಯ ವಸ್ತು, ಪರಿಸರ, ಸಾಮಾಜಿಕ-ಸಾಂಸ್ಕೃತಿಕ ಸೂಕ್ಷ್ಮತೆ ಮತ್ತು ಆರ್ಥಿಕ ಚಟುವಟಿಕೆಗಳನ್ನು ಅಧ್ಯಯನ ಮಾಡಿ ಅದಕ್ಕೆ ತಕ್ಕಂತೆ ಮನೆಯ ವಿನ್ಯಾಸಗಳನ್ನು

ಅಖಿಲಾ ರಮೇಶ್

ರೂಪಿಸಿಕೊಡಲಾಗುವುದು. ನಿವಾಸಿಯ ಆರ್ಥಿಕ ಚೈತನ್ಯ ಮತ್ತು ಅಭಿರುಚಿಗೆ ಅನುಗುಣವಾಗಿ ವಿನ್ಯಾಸಗೊಳಿಸಲಾಗುತ್ತದೆ.

**ಹಳ್ಳಿಗಳ ಪುನರ್ ಅಭಿವೃದ್ಧಿ:** ಹಳ್ಳಿಗಳಲ್ಲಿರುವ ವಸತಿ ಪ್ರದೇಶವನ್ನು ಸಮಗ್ರವಾಗಿ, ಸುಂದರವಾಗಿ ಬದಲಿಸಲು ಸಾಧ್ಯವಾಗಿಸುವ ಯೋಜನೆ. ವ್ಯವಸ್ಥಿತ ಮೂಲಸೌಕರ್ಯದೊಂದಿಗೆ ಹಳ್ಳಿಯನ್ನು ಪುನರ್ ಅಭಿವೃದ್ಧಿ ಮಾಡಬಹುದು.

**ಪ್ರಾಜೆಕ್ಟ್ ಸೂಟ್‌ಕೇಸ್:** ನಗರ ಪ್ರದೇಶದಲ್ಲಿರುವ ನಿರಾಶ್ರಿತರು ಶಾಶ್ವತ ಮನೆ ಪಡೆಯುವುದಕ್ಕೆ ಮೊದಲು 'ಪ್ರಾಜೆಕ್ಟ್ ಸೂಟ್‌ಕೇಸ್' ಮೂಲಕ ಆಶ್ರಯ ಪಡೆದುಕೊಳ್ಳಬಹುದು. ಇದು ಸುಲಭವಾಗಿ ಫಿಕ್ಸ್ ಮಾಡಬಹುದಾದ ತಾತ್ಕಾಲಿಕ ಗೃಹ. ಪ್ಲಾಸ್ಟಿಕ್‌ನಿಂದ ಗುಡಾರ ಕಟ್ಟುವುದಕ್ಕೆ ಇದು ಪರ್ಯಾಯ.

**ತಾತ್ಕಾಲಿಕ ಮನೆ:** ತಗಡಿನ ಶೀಟ್‌ಗಳಿಂದ ಮಾಡಿದ ಕೊಠಡಿ ಅಥವಾ ಗುಡಿಸಲುಗಳಲ್ಲಿ ವಾಸಿಸುವ ಕಟ್ಟಡ ನಿರ್ಮಾಣ ಕಾರ್ಮಿಕರಿಗಾಗಿ ತಾತ್ಕಾಲಿಕವಾಗಿಯಾದರೂ ಉತ್ತಮ ವಿನ್ಯಾಸದಿಂದ ಕೂಡಿದ, ಮನೆಯಲ್ಲಿನ ವಸ್ತುಗಳನ್ನು ಒಪ್ಪವಾಗಿ ಇರಿಸಿಕೊಳ್ಳಲು ಸಾಧ್ಯವಾಗುವಂತೆ ತಾತ್ಕಾಲಿಕ ವಸತಿ ನಿರ್ಮಿಸಿಕೊಡಲಾಗುತ್ತದೆ.



ಅಖಿಲಾ ರಮೇಶ್

## ಕನಸಿನ ಬೆನ್ನು ಹತ್ತಿದವರು

ಬಡವರಿಗೂ ಉತ್ತಮ ಸೂರು ಸಿಗಬೇಕು ಎಂಬ ಕನಸಿನ ಬೆನ್ನು ಹತ್ತಿದ್ದಾರೆ ಅಖಿಲಾ ಮತ್ತು ಡಾ.ಉಷಾ ವಸ್ತಾರೆ.

ಅಮೆರಿಕದಲ್ಲಿ ನರವಿಜ್ಞಾನ ಕ್ಷೇತ್ರದಲ್ಲಿ ವಿಜ್ಞಾನಿ ಆಗಿದ್ದ ಡಾ.ಉಷಾ ವಸ್ತಾರೆ ಅವರು ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಮಹಿಳೆಯರ ಸ್ವಾವಲಂಬನೆ, ಮಾನಸಿಕ ಆರೋಗ್ಯ ಜಾಗೃತಿಗಾಗಿ ಸ್ರಮಿಸುತ್ತಿದ್ದಾರೆ.

ಅಖಿಲಾ ರಮೇಶ್ 'ನಿವಾಸ' ಸೇವಾ ಸಂಸ್ಥೆಯ ಸ್ಥಾಪಕ ನಿರ್ದೇಶಕರು. ಇವರು ಯೋಜನಾ ನಿರ್ವಹಣೆ ಮತ್ತು ನಗರ ವಿನ್ಯಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದ ವಾಸ್ತುಶಿಲ್ಪಿ. ಸಿಎಸ್‌ಐಎಂ ಫೆಲೋಷಿಪ್ ಪ್ರಶಸ್ತಿ ಮತ್ತು ಪ್ರತಿಷ್ಠಿತ ಎಂಎಸ್‌ಡಿಎಸ್ ಪ್ರಶಸ್ತಿ ಪಡೆದಿದ್ದಾರೆ.

ಸಂಪರ್ಕಕ್ಕೆ ಅಖಿಲಾ ರಮೇಶ್ 9880651015, ಡಾ.ಉಷಾ ವಸ್ತಾರೆ 9980993850. ❖